ನಮೂನೆ-12

{ನಿಯಮ 14(3)ಅನ್ನು ನೋಡಿ}

ಚುನಾವಣಾ ನೋಟೀಸು

# ಕೆ.ವಿ.ಎಲ್. ಎಂಪ್ಲಾಯೀಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ನಂ.32, ಮತ್ತು 10ನೇ ಕ್ರಾಸ್, ರೈಲ್ವೆ ಪ್ಯಾರಲಲ್ ರಸ್ತೆ, ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು-560020

ಕರ್ನಾಟಕ ವೀರಶೈವ ಲಿಂಗಾಯತ ಎಂಪ್ಲಾಯೀಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಈ ಸಹಕಾರ ಸಂಘದ ಆಡಳಿತ ಮಂಡಲಿ ನಿರ್ದೇಶಕರ ಸ್ಥಾನಗಳಿಗೆ, ಸಾಮಾನ್ಯ ಚುನಾವಣೆಯನ್ನು, ಚುನಾವಣಾ ದಿನಾಂಕದಿಂದ ಮುಂದಿನ ಐದು ವರ್ಷಗಳ ಅವಧಿಗೆ, ಸಾಮಾನ್ಯ ಸ್ಥಾನ, ಮಹಿಳಾ ಮೀಸಲು ಸ್ಥಾನ, ಹಿಂದುಳಿದ ಪ್ರವರ್ಗ-ಎ, ಹಿಂದುಳಿದ ಪ್ರವರ್ಗ-ಬಿ ಮೀಸಲು ಸ್ಥಾನ, ಪರಿಶಿಷ್ಟ ಜಾತಿ ಮೀಸಲು ಸ್ಥಾನ, ಪರಿಶಿಷ್ಟ ಪಂಗಡ ಮೀಸಲು ಸ್ಥಾನಗಳಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ನಂ.17/4, ವೀರಶೈವ ಲಿಂಗಾಯತ ಭವನ, ಸದಾಶಿವನಗರ, ಬೆಂಗಳೂರು-560080 ಇಲ್ಲಿ ದಿನಾಂಕ:25-01-2026 ರಂದು ಬೆಳಿಗ್ಗೆ 09:00 ಗಂಟೆಯಿಂದ ಸಂಜೆ 4:00 ಗಂಟೆಯವರೆಗೆ ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ.

ಸದರಿ ಚುನಾವಣಾ ವೇಳಾಪಟ್ಟಿಯು ಈ ಕೆಳಗಿನಂತೆ ಇರತಕ್ಕದ್ದೆಂದೂ ನೋಟೀಸು ನೀಡಲಾಗಿದೆ.

| ಕ್ರ. ಸಂ. | ವಿವರ | ದಿನಾಂಕ ಮತ್ತು ವೇಳೆ |
|---|---|---|
| ಎ. | ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ:11-01-2026 ಭಾನುವಾರ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ಅಥವಾ ರಿಟರ್ನಿಂಗ್ ಅಧಿಕಾರಿಯಿಂದ ನೇಮಿಸಲ್ಪಟ್ಟಿರುವ ಅಧಿಕಾರಿಯಿಂದ ಸಂಘದ ರಿಜಿಸ್ಟರ್ ಕಛೇರಿಯಲ್ಲಿ |
| ಬಿ. | ಆಕಾಂಕ್ಷೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ (ನಿಯಮ 14ಎ) | ದಿನಾಂಕ:17-01-2026 ಶನಿವಾರ ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ಅಥವಾ ರಿಟರ್ನಿಂಗ್ ಅಧಿಕಾರಿಯಿಂದ ನೇಮಿಸಲ್ಪಟ್ಟಿರುವ ಅಧಿಕಾರಿಯಿಂದ ಸಂಘದ ರಿಜಿಸ್ಟರ್ ಕಛೇರಿಯಲ್ಲಿ |
| ಸಿ. | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14ಬಿ) | ದಿನಾಂಕ:18-01-2026 ಭಾನುವಾರ ಮಧ್ಯಾಹ್ನ 12.00 ಗಂಟೆಗೆ (ಸಂಘದ ಕಛೇರಿಯಲ್ಲಿ) |
| ಡಿ. | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ{ನಿಯಮ 14ಬಿ(4)} | ದಿನಾಂಕ: 18-01-2026 ಭಾನುವಾರ ನಾಮಪತ್ರಗಳ ಪರಿಶೀಲನೆಯ ನಂತರ (ಸಂಘದ ಕಛೇರಿಯಲ್ಲಿ) |
| ಇ. | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನ (ನಿಯಮ 14ಸಿ) | ದಿನಾಂಕ:19-01-2026 ಸೋಮವಾರ ಮಧ್ಯಾಹ್ನ 3.00 ಗಂಟೆಯ ಒಳಗೆ |
| ಎಫ್. | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ(ನಿಯಮ 14ಡಿ) | ದಿನಾಂಕ: 19-01-2026 ಸೋಮವಾರ ಮಧ್ಯಾಹ್ನ 3.00 ಗಂಟೆಯ ನಂತರ (ಸಂಘದ ಕಛೇರಿಯಲ್ಲಿ) |

| ಕ್ರ. ಸಂ. | ವಿವರ | ದಿನಾಂಕ ಮತ್ತು ವೇಳೆ |
|---|---|---|
| ಜಿ. | ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳು ಆಪೇಕ್ಷಿಸಿದಲ್ಲಿ ಚಿಹ್ನೆಗಳ ಹಂಚಿಕೆ (ನಿಯಮ 14ಇ) | ದಿನಾಂಕ: 19-01-2026 ಸೋಮವಾರ ಮಧ್ಯಾಹ್ನ 3.00 ಗಂಟೆಯ ಆನಂತರ (ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆಯ ನಂತರ) ಸಂಘದ ಕಛೇರಿಯಲ್ಲಿ |
| ಹೆಚ್. | ಚಿಹ್ನೆಯ ಸಹಿತ ಕ್ರಮಬದ್ಧವಾಗಿ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿ (ನಿಯಮ 14ಡಿ ಮತ್ತು 14ಇ) | ದಿನಾಂಕ: 19-01-2026 ಸೋಮವಾರ ಮಧ್ಯಾಹ್ನ 3.00 ಗಂಟೆಯ ನಂತರ (ಸಂಘದ ಕಛೇರಿಯಲ್ಲಿ) |
| ಐ. | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ:25-01-2026 ಭಾನುವಾರ ವಿಳಾಸ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ನಂ.17/4, ವೀರಶೈವ ಲಿಂಗಾಯತ ಭವನ, ಸದಾಶಿವನಗರ, ಬೆಂಗಳೂರು-560080 ಇಲ್ಲಿ ಬೆಳಿಗ್ಗೆ 09:00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ |
| ಜೆ. | ಮತ ಏಣಿಕೆ ದಿನ ಮತ್ತು ದಿನಾಂಕ | ದಿನಾಂಕ: 25-01-2026 ಭಾನುವಾರ ಮತದಾನದ ಅವಧಿ ಮುಗಿದ ತಕ್ಷಣ |
| ಕೆ. | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | ದಿನಾಂಕ: 25-01-2026 ಭಾನುವಾರ |

## ಸೂಚನೆಗಳು :

1. ಸರ್ಕಾರದ ಅಧಿಸೂಚನೆ ಮತ್ತು ಸಹಕಾರ ಸಂಘಗಳ ಕಾಯ್ದೆ 1959 ರ ಪ್ರಕಾರ ಚುನಾವಣೆಯ ಮೂಲಕ ಭರ್ತಿ ಮಾಡಬೇಕಾಗಿರುವ ಆಡಳಿತ ಮಂಡಲಿಯ ಸದಸ್ಯರ ಸ್ಥಾನಗಳ ಸಂಖ್ಯೆ ಒಟ್ಟು 17. ವಿವರ ಈ ಕೆಳಕಂಡಂತಿದೆ.

| | |
|---|---|
| ಸಾಮಾನ್ಯ ಸ್ಥಾನ | – 11 (ಹನ್ನೊಂದು) |
| ಮಹಿಳಾ ಮೀಸಲು ಸ್ಥಾನ | – 02 (ಎರಡು) |
| ಪರಿಶಿಷ್ಟ ಜಾತಿ ಮೀಸಲಾತಿ ಸ್ಥಾನ | – 01 (ಒಂದು) |
| ಪರಿಶಿಷ್ಟ ಪಂಗಡ ಮೀಸಲಾತಿ ಸ್ಥಾನ | – 01 (ಒಂದು) |
| ಹಿಂದುಳಿದ ಪ್ರವರ್ಗ-ಎ ಮೀಸಲಾತಿ ಸ್ಥಾನ | – 01 (ಒಂದು) |
| ಹಿಂದುಳಿದ ಪ್ರವರ್ಗ-ಬಿ ಮೀಸಲಾತಿ ಸ್ಥಾನ | – 01 (ಒಂದು) |

2. (ಸರ್ಕಾರದ ಆದೇಶ ಸಂಖ್ಯೆ:ಸಂವ್ಯಶಾಇ/58/ಶಾಸನ/2014, ಬೆಂಗಳೂರು ದಿನಾಂಕ:06-09-2014 ರನ್ವಯ ಹಿಂದುಳಿದ ವರ್ಗಗಳ ಮೀಸಲಾತಿ). ನಾಮಪತ್ರವನ್ನು ಸಲ್ಲಿಸುವುದಕ್ಕಾಗಿ ಗೊತ್ತುಪಡಿಸಿದ ಕೊನೆಯ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗೆ ಸಂಘದ ಕಛೇರಿಯಲ್ಲಿ ನಮೂನೆ-13 ರಲ್ಲಿ ಪೂರ್ಣಗೊಳಿಸಿದ ಅಭ್ಯರ್ಥಿಯ ಮತ್ತು ಮತದಾನದ ಹಕ್ಕುಳ್ಳ ಇನ್ನೊಬ್ಬ ಸದಸ್ಯನು ಸೂಚಕನಾಗಿ ಯುಕ್ತವಾಗಿ ರುಜು ಮಾಡಿ ಸಲ್ಲಿಸತಕ್ಕದ್ದು. ಒಬ್ಬ ಅರ್ಹ ಸದಸ್ಯರು ಒಬ್ಬ ಅಭ್ಯರ್ಥಿಗೆ ಮಾತ್ರ ಸೂಚಕನಾಗಿರತಕ್ಕದ್ದು. ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸಿದಲ್ಲಿ ಮೊದಲು ಸೂಚಿಸಿರುವ ಅಭ್ಯರ್ಥಿಯ ನಾಮಪತ್ರವನ್ನು ಅಂಗೀಕರಿಸಿ ಉಳಿದ ನಾಮಪತ್ರಗಳನ್ನು ತಿರಸ್ಕರಿಸಲಾಗುವುದು.

3. ಅಭ್ಯರ್ಥಿಯು ಒಂದು ನಾಮಪತ್ರವನ್ನು ಮಾತ್ರ ಸಲ್ಲಿಸತಕ್ಕದ್ದು.

4. ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷೆಯುಳ್ಳ ಅಭ್ಯರ್ಥಿಗಳ ನಾಮಪತ್ರವು ಸಹಕಾರ ಸಂಘದ ಹೆಸರಿಗೆ ರೂ.2000/- ಗಳನ್ನು ನಗದುರೂಪದಲ್ಲಿ ಅಥವಾ ಪೇ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಠೇವಣಿಸಿದ ರಸೀದಿಯನ್ನು ಒಳಗೊಂಡಿರತಕ್ಕದ್ದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮತ್ತು ಹಿಂದುಳಿದ ಪ್ರವರ್ಗ-ಎ ಹಿಂದುಳಿದ ಪ್ರವರ್ಗ-ಬಿ ಮತ್ತು ಮಹೀಳಾ ಈ ಮೀಸಲಾತಿ ಸ್ಥಾನದಿಂದ ಸ್ಪರ್ಧಿಸುವ ಉಮೇದುವಾರರು ಸಂಘದ ಹೆಸರಿಗೆ ರೂ.1000/-ಗಳ ಚುನಾವಣಾ ಠೇವಣಿಯನ್ನು ಸಲ್ಲಿಸಿದ, ರಸೀದಿಯನ್ನು ಸಲ್ಲಿಸತಕ್ಕದ್ದು.

5. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ಪ್ರವರ್ಗ-ಎ, ಪ್ರವರ್ಗ-ಬಿ, ಮತ್ತು ಮಹಿಳಾ ಇವರುಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣಪತ್ರವನ್ನು ಲಗತ್ತಿಸಿರತಕ್ಕದ್ದು.

6. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಯಾವುದೇ ಅಭ್ಯರ್ಥಿಯ ಹೆಸರು ಇಲ್ಲದಿದ್ದರೆ ಅಥವಾ ಅವನು ಮತದಾನ ಪ್ರಾರಂಭವಾಗುದಕ್ಕೆ ಮುಂಚೆ ಮೃತನಾದರೆ, ಸಂದರ್ಭಾನುಸಾರ ಆ ಪಟ್ಟಿಯನ್ನು ಪ್ರಕಟಿಸಿದ ಅಥವಾ ಅವನ ಮರಣದ ತರುವಾಯ ಠೇವಣಿಯನ್ನು ಸಾಧ್ಯವಾದಷ್ಟು ಬೇಗನೆ ಹಿಂತಿರುಗಿಸಲಾಗುವುದು. ಮತ್ತು ಸ್ಪರ್ಧಿಸಿದ ಅಭ್ಯರ್ಥಿಯು ಚುನಾಯಿತನಾಗದಿದ್ದರೆ ಚುನಾವಣೆಯಲ್ಲಿ ಎಲ್ಲ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯ ಆರನೇ ಒಂದರಷ್ಟು ಕ್ರಮಬದ್ಧ ಮತಗಳನ್ನು ಅವನು ಪಡೆಯದಿದ್ದಲ್ಲಿ ಆತನ ಠೇವಣಿಯನ್ನು ಸಂಘಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು

7. ನಾಮಪತ್ರಗಳ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ಅಭ್ಯರ್ಥಿಗಳು ಅಥವಾ ಅವರ ಸೂಚಕರು ರಿಟರ್ನಿಂಗ್ ಅಧಿಕಾರಿಯು ನಿಗದಿಪಡಿಸಿರುವ ವೇಳೆ ಮತ್ತು ಸ್ಥಳದಲ್ಲಿ ಹಾಜರಿರಬಹುದು.

8. ನಾಮಪತ್ರವನ್ನು ಮತ್ತು ಅದನ್ನು ಹಿಂಪಡೆಯುವ ನೋಟೀಸನ್ನು ಅದಕ್ಕಾಗಿ ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ನಿರ್ಧಿಷ್ಟಡಿಸಿದ ಸ್ಥಳದಲ್ಲಿ ನಿರ್ಧಿಷ್ಟಡಿಸಿದ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

9. ನಮೂನೆ-13ರ "ನಾಮಪತ್ರ" ಮತ್ತು ನಮೂನೆ-15ರ "ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಬಗ್ಗೆ ನೋಟೀಸು", ಇವುಗಳನ್ನು ನಿಯಮಾನುಸಾರ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕರಿಂದ ಸಂಘದ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ.

10. ಯಾವುದೇ ಅಭ್ಯರ್ಥಿಯು ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ನೀಡಿದ ನಂತರ ಸದರಿ ನೋಟೀಸನ್ನು ರದ್ದುಪಡಿಸಲು ಅವಕಾಶ ನೀಡಲಾಗುವುದಿಲ್ಲ.

11. ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಚಿಹ್ನೆಯನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು. ಈ ಉದ್ದೇಶಕ್ಕಾಗಿ "ಮಾನ್ಯ ಮಾಡಿದ ರಾಜಕೀಯ ಪಕ್ಷ" ಎಂದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಹಾಗೂ ಹಂಚಿಕೆ) ಆದೇಶ 1968 ರಡಿ ಭಾರತದ ಚುನಾವಣಾ ಆಯೋಗದಿಂದ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿ ರಾಜ್ಯ ಪಕ್ಷ ಎಂದು ಗುರುತಿಸಲ್ಪಟ್ಟ ಪ್ರತಿಯೊಂದು ಪಕ್ಷದ ಚಿನ್ಹೆ ಹೊರತುಪಡಿಸಿ ಒಂದು ಮುಕ್ತ ಚಿಹ್ನೆಯನ್ನು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿದ್ದಲ್ಲಿ ಚೀಟಿ ಎತ್ತುವ ಮೂಲಕ ನಿರ್ಧರಿಸಲಾಗುವುದು. ಯಾವ ಅಭ್ಯರ್ಥಿಯ ಪರವಾಗಿ ಚೀಟಿ ಬರುತ್ತದೋ ಆ ಅಭ್ಯರ್ಥಿಗೆ ಅಂಥ ಚಿಹ್ನೆಯನ್ನು ಹಂಚಿಕೆ ಮಾಡಲಾಗುವುದು.

12. ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಉಮೇದುವಾರರ ಸಂಖ್ಯೆ ಹೆಚ್ಚಾಗಿದ್ದರೆ ಮತದಾನವನ್ನು ನಡೆಸಲಾಗುವುದು.

13. ಚುನಾವಣೆಯಲ್ಲಿ ಮತ ನೀಡುವ ಎಲ್ಲಾ ಮತದಾರರು ಮತದಾನ ಕೇಂದ್ರದಲ್ಲಿ ಖುದ್ದಾಗಿ ಮತ ನೀಡತಕ್ಕದ್ದು. ಯಾವುದೇ ಮತವನ್ನೂ ಪ್ರಾಕ್ಸಿ ಮೂಲಕ ದಾಖಲಿಸಲು ಅನುಮತಿಸಲಾಗುವುದಿಲ್ಲ.

14. ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣಾ ಪ್ರಕ್ರಿಯೆ ಮುಗಿಯುವವರೆಗೆ ಸಾರ್ವಜನಿಕ ರಜಾ ದಿನಗಳಲ್ಲೂ ಸಹ ಸಂಘದ ಆಡಳಿತ ಕಛೇರಿಯು ತೆರೆದಿರುತ್ತದೆ. ಮತ್ತು ಚುನಾವಣಾ ವೇಳಾಪಟ್ಟಿಯ ಪ್ರಕಾರ ಪ್ರತಿಕ್ರಿಯೆಗಳನ್ನು ನಡೆಸಲಾಗುವುದು.

15. ಅರ್ಹ ಮತದಾರರ ಪಟ್ಟಿಯಲ್ಲಿ ಇಲ್ಲದೇ ಇರುವವರು ಚುನಾವಣೆಯಲ್ಲಿ ಮತ ಚಲಾಯಿಸಲು, ಅಭ್ಯರ್ಥಿಗಳಿಗೆ ಸೂಚಕನಾಗಿ ನಾಮಪತ್ರದಲ್ಲಿ ಸಹಿ ಮಾಡಲು ಮತ್ತು ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಾಗಿರುವುದಿಲ್ಲ.

16. ಸಹಕಾರ ಸಂಘದ ಆಡಳಿತ ಮಂಡಲಿಯ ಚುನಾವಣೆಯಲ್ಲಿ ಮತದಾನ ಮಾಡಲಿಚ್ಛಿಸುವ ಸದಸ್ಯರು ಕಡ್ಡಾಯವಾಗಿ ಸಹಕಾರ ಸಂಘದಿಂದ ನಿಯಮ 13ಎ ರಡಿ ನೀಡಲಾಗಿರುವ ಗುರುತಿನ ಕಾರ್ಡನ್ನು ಕಡ್ಡಾಯವಾಗಿ ಹಾಜರಪಡಿಸಿ ಮತದಾನ ಸ್ಥಳದಲ್ಲಿ ಇಟ್ಟಿರುವ ರಿಜಿಸ್ಟರಿನಲ್ಲಿ ಸಹಿ ಮಾಡಿ ಗುರುತಿನ ಚೀಟಿಯನ್ನು ಪಡೆದುಕೊಳ್ಳತಕ್ಕದ್ದು.

17. ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಿದ ಅಂತಿಮ ಅರ್ಹ ಮತದಾರರ ಪಟ್ಟಿಯಲ್ಲಿರುವ ಸದಸ್ಯರಿಗೆ ಮಾತ್ರ ಉಮೇದುವಾರಿಕೆ ಸಲ್ಲಿಸಲು, ಸೂಚಕರಾಗಲು ಹಾಗೂ ಮತದಾನ ಮಾಡಲು ಅವಕಾಶವಿರುತ್ತದೆ.

18. ಒಬ್ಬ ಅಭ್ಯರ್ಥಿಯು ಒಂದು ಮತಕ್ಷೇತ್ರದಿಂದ ಸ್ಪರ್ಧಿಸಲು ಮಾತ್ರ ಅವಕಾಶವಿರುತ್ತದೆ.

ಸಹಿ/-

(ಬಿ.ಎಸ್.ಹರೀಶ್ ಕುಮಾರ)
ರಿಟರ್ನಿಂಗ್ ಅಧಿಕಾರಿ,
ಕರ್ನಾಟಕ ವೀರಶೈವ ಲಿಂಗಾಯತ ಎಂಪ್ಲಾಯೀಸ್ ಕ್ರೆಡಿಟ್
ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು

ಸ್ಥಳ: ಬೆಂಗಳೂರು
ದಿನಾಂಕ: **08-01-2026**

**ತೆರೆದ-ಅಂಚೆ**

**ರವರಿಗೆ,**

**ಶ್ರೀಮತಿ/ಶ್ರೀ** ______________________________

______________________________

______________________________

**If Undelivered please return to :**

ಸುನಿಲ್ ಎಸ್.
ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ

**ಕೆ.ವಿ.ಎಲ್. ಎಂಪ್ಲಾಯೀಸ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

**ನಂ.32, 32ನೇ ಮತ್ತು 10ನೇ ಕ್ರಾಸ್, ರೈಲ್ವೆ ಪ್ಯಾರಲಲ್ ರಸ್ತೆ,**
**ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು-560020**